**ಕರ್ನಾಟಕ ಮಾಹಿತಿ ಆಯೋಗದಲ್ಲಿ ದಿ: 20-03-2019 ರಂದು ಅಪರಾಹ್ನ 12:15 ಕ್ಕೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಎಲ್. ಕೃಷ್ಣಮೂರ್ತಿ, ರಾಜ್ಯ ಮುಖ್ಯ ಮಾಹಿತಿ ಆಯುಕ್ತರು.
2. ಶ್ರೀ ಎನ್.ಪಿ. ರಮೇಶ್, ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ ಪಿ.ಜಿ. ವಿಜಯ ಕುಮಾರ್, ರಾಜ್ಯ ಮಾಹಿತಿ ಆಯುಕ್ತರು.
4. ಶ್ರೀ ಎಸ್.ಎಲ್ ಪಾಟೀಲ್, ರಾಜ್ಯ ಮಾಹಿತಿ ಆಯುಕ್ತರು.
5. ಶ್ರೀ ಹೆಚ್.ಪಿ. ಸುಧಾಮ ದಾಸ್, ರಾಜ್ಯ ಮಾಹಿತಿ ಆಯುಕ್ತರು.
6. ಡಾ॥ ಕೆ.ಇ. ಕುಮಾರಸ್ವಾಮಿ, ರಾಜ್ಯ ಮಾಹಿತಿ ಆಯುಕ್ತರು.
7. ಡಾ॥ ಲಿಂಗರಾಜ್ .ಕೆ, ರಾಜ್ಯ ಮಾಹಿತಿ ಆಯುಕ್ತರು.
8. ಶ್ರೀಮತಿ ಹೊನ್ನಾಂಬ .ಎಸ್, ಕಾರ್ಯದರ್ಶಿ.
9. ಶ್ರೀ ಚಂದ್ರಕಾಂತ್ ಭಜಂತ್ರಿ, ಅಧೀನ ಕಾರ್ಯದರ್ಶಿ.
10. ಶ್ರೀಮತಿ ಕೆ. ಲಕ್ಷ್ಮೀ, ಅಧೀಕ್ಷಕರು.

ಆಯೋಗದ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು, ಎಲ್ಲಾ ಮಾಹಿತಿ ಆಯುಕ್ತರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರ ಅಧಿಕಾರಿ/ಸಿಬ್ಬಂದಿಯನ್ನು ಸ್ವಾಗತಿಸುತ್ತಾ, ಅಜೆಂಡಾದ ಪ್ರಕಾರ ಸಭೆ ನಡೆಸಲು ಮಾನ್ಯ ಮುಖ್ಯ ಮಾಹಿತಿ ಆಯುಕ್ತರನ್ನು ಕೋರಿದರು.

ಹಿಂದಿನ ಸಭೆಯ ಅನುಪಾಲನ ವರದಿಯನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಕಾರ್ಯದರ್ಶಿರವರಿಗೆ ತಿಳಿಸಲಾಯಿತು.

**ಸಭೆಯಲ್ಲಿ ಚರ್ಚಿಸಲಾದ ವಿಷಯಗಳು:**

**1. ಒಬ್ಬ ಮೇಲ್ಮನವಿದಾರ 100ಕ್ಕೂ ಹೆಚ್ಚು ಮೇಲ್ಮನವಿ ಅರ್ಜಿಗಳನ್ನು ಸಲ್ಲಿಸಿದಲ್ಲಿ, ಅದನ್ನು ಪೂರ್ಣ ಪೀಠಕ್ಕೆ ವರ್ಗಾಯಿಸುವ ಕುರಿತು ಮತ್ತು ಯಾವ ಕಾರಣಕ್ಕಾಗಿ ಪೂರ್ಣಪೀಠಕ್ಕೆ ವರ್ಗಾಯಿಸಬೇಕು ಎಂದು ತೀರ್ಮಾನಿಸುವ ಕುರಿತು.**

ಕರ್ನಾಟಕ ಮಾಹಿತಿ ಆಯೋಗಕ್ಕೆ ಒಬ್ಬ ಅರ್ಜಿದಾರರು 100 ಕ್ಕಿಂತ ಹೆಚ್ಚು ಮೇಲ್ಮನವಿಗಳನ್ನು ಸಲ್ಲಿಸಿದಲ್ಲಿ ಅಂತಹ ಅರ್ಜಿದಾರರ ಮೇಲ್ಮನವಿಗಳನ್ನು ಪೂರ್ಣ ಪೀಠಕ್ಕೆ ವರ್ಗಾಯಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಾರ್ವಜನಿಕ ಪ್ರಾಧಿಕಾರಗಳು ಮಾಹಿತಿ ಕೋರಿ ಸಲ್ಲಿಸುವ ಅರ್ಜಿಗಳಿಗೆ ನಿಗದಿತ ಅವಧಿಯಲ್ಲಿ/ಸಮರ್ಪಕ ಮಾಹಿತಿ ಒದಗಿಸದ ಕಾರಣ ಮೇಲ್ಮನವಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಅವುಗಳನ್ನು ಪೂರ್ಣಪೀಠದಲ್ಲಿ ವಿಚಾರಣೆ ನಡೆಸುವುದು ಅಗತ್ಯ ಬಂದಲ್ಲಿ ಇಲಾಖಾ ಮುಖ್ಯಸ್ಥರನ್ನು ಸಹ ವಿಚಾರಣೆಗೆ ಹಾಜರುಪಡಿಸುವುದು ಸೂಕ್ತವೆಂದು ತೀರ್ಮಾನಿಸಲಾಯಿತು.

ಕಾಯ್ದೆಯ ಸಮರ್ಪಕ ಅನುಷ್ಠಾನದ ಹಿತದೃಷ್ಟಿಯಿಂದ ಮೇಲಿನಂತೆ ತೀರ್ಮಾನಿಸಲಾಯಿತು.

ಕ್ರಮ: ಅಧೀನ ಕಾರ್ಯದರ್ಶಿ

2. ಎಲ್ಲಾ ನ್ಯಾಯಾಲಯಗಳಲ್ಲಿ ಯಾವುದೇ ವಿವಾದಾತ್ಮಕ ವಿಷಯಗಳ ಮೇಲೆ ಸಮಾನವಾದ ನಿರ್ಧಾರ ತೆಗೆದುಕೊಳ್ಳುವ ಬಗ್ಗೆ.

ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 2(ಹೆಚ್) ಮತ್ತು 8(1) ರಡಿಯಲ್ಲಿ ನೀಡಲಾದ ಮಾಹಿತಿಗೆ ಸಂಬಂಧಿಸಿದಂತೆ ಆಯೋಗಕ್ಕೆ ಬರುವ ಮೇಲ್ಮನವಿ ಅರ್ಜಿಗಳಿಗೆ ಆಯೋಗದಿಂದ ನೀಡಲಾಗುತ್ತಿರುವ ಆದೇಶಗಳು ಏಕರೂಪದಲ್ಲಿರುವುದಿಲ್ಲವೆಂದು ಸಾರ್ವಜನಿಕರು ಆಕ್ಷೇಪಿಸುತ್ತಿದ್ದು, ಇಂತಹ ಪ್ರಕರಣಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಏಕರೂಪದ ಆದೇಶ ಹೊರಡಿಸುವುದು ಸೂಕ್ತವೆಂದು ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಅಭಿಪ್ರಾಯ ವ್ಯಕ್ತ ಪಡಿಸಿದ್ದನ್ನು, ಮಾನ್ಯ ಆಯುಕ್ತರುಗಳು ಸಮ್ಮತಿಸಿದರು.

3. ಕಲಬುರ್ಗಿ ಮತ್ತು ಬೆಳಗಾವಿಯಲ್ಲಿ ಆಯೋಗದ ಪೀಠ ರಚನೆ ಕುರಿತು.

ಸರ್ಕಾರದ ಅಧಿಸೂಚನೆ ಸಂಖ್ಯೆ: ಪಿಡಿ/75/ಯೋಪರ/2018, ದಿನಾಂಕ: 10-01-2019 ರನ್ವಯ ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಪೀಠ ಸ್ಥಾಪನೆ ಸಂಬಂಧ ಪ್ರಾದೇಶಿಕ ಆಯುಕ್ತರುಗಳು ಗುರುತಿಸಿದ್ದ ಸರ್ಕಾರಿ ಕಟ್ಟಡಗಳು ಗುಣಮಟ್ಟದಲ್ಲಿ ಕಳಪೆಯಾಗಿರುವುದರಿಂದ ಪೀಠ ಸ್ಥಾಪನೆಗೆ ಸೂಕ್ತವಾಗಿಲ್ಲದಿರುವುದರಿಂದ ಸದರಿ ಸ್ಥಳಗಳ ಬದಲಿಗೆ ಕೂಡಲೇ ಸೂಕ್ತವಾದ ಖಾಸಗಿ ಕಟ್ಟಡಗಳನ್ನು ಬಾಡಿಗೆ ಆಧಾರದ ಮೇಲೆ ಪಡೆಯುವಂತೆ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ) ರವರಿಂದ ಬಂದಿರುವ ಪತ್ರವನ್ನು ಮಾನ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು. ಇದಕ್ಕೆ ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳಲ್ಲಿ ಕೂಡಲೇ ಸೂಕ್ತವಾದ ಖಾಸಗಿ ಕಟ್ಟಡವನ್ನು ಗುರುತಿಸಿ ಲೋಕೋಪಯೋಗಿ ಇಲಾಖೆಯಿಂದ ಬಾಡಿಗೆಯನ್ನು ನಿಗದಿಪಡಿಸುವಂತೆ ಕ್ರಮವಹಿಸಲು ಅಧೀನ ಕಾರ್ಯದರ್ಶಿಯವರಿಗೆ ಸೂಚಿಸಿದರು ಹಾಗೂ ಗುರುತಿಸಲಾದ ಖಾಸಗಿ ಕಟ್ಟಡಗಳ ಕುರಿತು ಈ ಮಾಹೆಯ ಅಂತ್ಯದೊಳಗೆ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

ಮುಂದುವರೆಯುತ್ತಾ, ರಾಜ್ಯ ಮಾಹಿತಿ ಆಯುಕ್ತರುಗಳು ರೊಟೇಷನ್ ಆಧಾರದ ಮೇಲೆ ಬೆಳಗಾವಿ ಮತ್ತು ಕಲಬುರಗಿ ಪೀಠಗಳಲ್ಲಿ ವಿಚಾರಣೆಯನ್ನು ನಡೆಸುವುದಾಗಿ ಈ ಹಿಂದೆ ತಿಳಿಸಿದ್ದು, ಈಗಲೂ ಅದಕ್ಕೆ ಸಮ್ಮತಿಸಿರುತ್ತಾರೆ.

ಒಂದು ಪೀಠಕ್ಕೆ ಅಗತ್ಯವುಳ್ಳ ಆಡಳಿತ ಸಿಬ್ಬಂದಿ ಮತ್ತು ನ್ಯಾಯಾಲಯ ಸಿಬ್ಬಂದಿ ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಆಯೋಗದಲ್ಲಿ ಮುಂದೆ ಖಾಲಿಯಾಗುವ ಮಾಹಿತಿ ಆಯುಕ್ತರುಗಳ (02) ಹುದ್ದೆಗಳನ್ನು ಸರ್ಕಾರ ನೇಮಕ ಮಾಡುವ ಸಮಯದಲ್ಲಿ ಬೆಳಗಾವಿ ಮತ್ತು ಕಲಬುರಗಿ ಪೀಠಕ್ಕೆ ನೇಮಕ ಮಾಡಿ ಅಧಿಸೂಚನೆ ಹೊರಡಿಸಿದ್ದಲ್ಲಿ ಬೆಳಗಾವಿ ಮತ್ತು ಕಲಬುರಗಿ ಪೀಠದಲ್ಲಿ ಆಯುಕ್ತರು ಖಾಯಂ ಆಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಆ ಹಂತದವರೆಗೂ ರೊಟೇಷನ್ ಆಧಾರದ ಮೇಲೆ ಕಾರ್ಯನಿರ್ವಹಿಸಲು ಸಭೆಯಲ್ಲಿ ಎಲ್ಲಾ ಮಾನ್ಯ ಆಯುಕ್ತರುಗಳು ಸಮ್ಮತಿಸಿದ್ದು, ಇದನ್ನು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅವಗಾಹನೆಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

ಕ್ರಮ: ಅಧೀನ ಕಾರ್ಯದರ್ಶಿ

4. **ಒಬ್ಬ ಅರ್ಜಿದಾರನು ಒಂದೇ ಸಾರ್ವಜನಿಕ ಪ್ರಾಧಿಕಾರಕ್ಕೆ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿರುವ ಕುರಿತು.**

ಒಬ್ಬನೇ ಅರ್ಜಿದಾರ ಒಂದೇ ಸಾರ್ವಜನಿಕ ಪ್ರಾಧಿಕಾರಕ್ಕೆ ಅತೀ ಹೆಚ್ಚು ಅರ್ಜಿಗಳನ್ನು ಸಲ್ಲಿಸುತ್ತಿದ್ದು, ಸಾರ್ವಜನಿಕ ಪ್ರಾಧಿಕಾರಗಳಿಗೆ ನಿಗದಿತ ಅವಧಿಯೊಳಗೆ ಮಾಹಿತಿ ಒದಗಿಸಲು ತೊಂದರೆಯಾಗಿದ್ದು, ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಅರ್ಜಿ ಸಂಖ್ಯೆಯ ಮಿತಿ ನಿಗದಿಗೊಳಿಸಲು ಆಯೋಗವನ್ನು ಕೋರುತ್ತಿದ್ದು, ಒಬ್ಬ ಅರ್ಜಿದಾರನು ಒಂದು ಸಾರ್ವಜನಿಕ ಪ್ರಾಧಿಕಾರಕ್ಕೆ ವರ್ಷಕ್ಕೆ ಗರಿಷ್ಟ 25 ಅರ್ಜಿಗಳನ್ನು ಸಲ್ಲಿಸುವ ಮಿತಿಗೊಳಪಡಿಸಲು ಅರ್ಜಿದಾರರ ಸಭೆ ಕರೆಯಲು ತೀರ್ಮಾನಿಸಲಾಯಿತು.

5. **ನ್ಯಾಯಾಲಯ ಸಭಾಂಗಣದಲ್ಲಿ ವೇದಿಕೆ ಮತ್ತು ಕಟಕಟೆ ಅಳವಡಿಸುವ ಕುರಿತು.**

ನ್ಯಾಯಾಲಯ ಸಭಾಂಗಣದಲ್ಲಿ ವೇದಿಕೆ ಮತ್ತು ಕಟಕಟೆಯನ್ನು ಅಳವಡಿಸಲು ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.

ಕ್ರಮ: ಅಧೀನ ಕಾರ್ಯದರ್ಶಿ

6. **ಅರ್ಜಿದಾರರ ಮೇಲ್ಮನವಿಯ ವಿಚಾರದಲ್ಲಿ ಮರು ಪರಿಶೀಲಿಸುವ ಬದಲಾಗಿ 18(1)ರನ್ವಯ ವಿಚಾರಣೆ ಕೈಗೊಳ್ಳುವ ಬಗ್ಗೆ.**

ಆಯೋಗದಲ್ಲಿ ವಿಚಾರಣೆಯಾಗಿ ಆದೇಶವಾದ ಪ್ರಕರಣಗಳ ಕುರಿತು ಮರು ಪರಿಶೀಲನೆಗೆ ಸ್ವೀಕೃತವಾಗುವ ಅರ್ಜಿಗಳನ್ನು ಮರು ಪರಿಶೀಲನೆಗೆ ಒಳಪಡಿಸುವ ಬದಲು ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 18(1)ರಡಿ ದೂರೆಂದು ಪರಿಗಣಿಸಿ ಇತ್ಯರ್ಥಪಡಿಸುವ ವಿಚಾರದಲ್ಲಿ ಆಯೋಗದ ಸೂಚನಾ ಫಲಕ/ಆಯೋಗದ ಅಂತರ್ಜಾಲದಲ್ಲಿ ಪ್ರಕಟಿಸಿ ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದು ಕ್ರಮವಹಿಸುವ ಕುರಿತು ತೀರ್ಮಾನಿಸಲು ಮುಂದಿನ ಸಭೆಯ ಅಜೆಂಡಾದಲ್ಲಿ ತರಲು ಸೂಚಿಸಲಾಯಿತು.

ಕ್ರಮ: ಅಧೀನ ಕಾರ್ಯದರ್ಶಿ

7. **60 ವರ್ಷಕ್ಕೂ ಮೇಲ್ಪಟ್ಟ ಹಿರಿಯ ನಾಗರೀಕರು ಆಯೋಗಕ್ಕೆ ಸಲ್ಲಿಸುವ ಮೇಲ್ಮನವಿಯನ್ನು ಆದ್ಯತೆ ಆಧಾರದ ಮೇಲೆ ಇತ್ಯರ್ಥಗೊಳಿಸುವ ಬಗ್ಗೆ.**

ಮೇಲ್ಮನವಿ ಸ್ವೀಕರಿಸುವ ಸಂದರ್ಭದಲ್ಲಿ ಹಿರಿಯ ನಾಗರೀಕರು ಎಂದು ತಿಳಿಸಿ ಅರ್ಜಿಯನ್ನು ಮೇಲ್ಮನವಿದಾರರಿಂದ ಸ್ವೀಕೃತಿ ವಿಭಾಗದಲ್ಲೆ ಪಡೆದು ಕ್ರಮವಹಿಸಲು ತೀರ್ಮಾನಿಸಲಾಯಿತು.

ಕ್ರಮ: ಅಧೀನ ಕಾರ್ಯದರ್ಶಿ

8. **ಆಯೋಗಕ್ಕೆ ಪ್ರಸ್ತುತ ಮಾನವ ಸಂಪನ್ಮೂಲ ಸೇವೆಯನ್ನು ಒದಗಿಸುತ್ತಿರುವ ಮೆ॥ ಕಿಯೋನಿಕ್ಸ್ ಸಂಸ್ಥೆಯ ಸೇವೆಯನ್ನು 4 ತಿಂಗಳುಗಳ ಅವಧಿಗೆ ಮುಂದುವರೆಸುವ ಕುರಿತು.**

ಆಯೋಗಕ್ಕೆ ಮಾನವ ಸಂಪನ್ಮೂಲ ಸೇವೆ ಒದಗಿಸುತ್ತಿರುವ ಮೆ॥ ಕಿಯೋನಿಕ್ಸ್ ಸಂಸ್ಥೆಯ ಅವಧಿಯು ಮಾರ್ಚ್–2019ಕ್ಕೆ ಅಂತ್ಯಗೊಳ್ಳುತ್ತಿದ್ದು, ಚುನಾವಣಾ ನೀತಿ ಸಂಹಿತೆ ಹಿನ್ನಲೆಯಲ್ಲಿ ಸದರಿ

ಸಂಸ್ಥೆಯ ಸೇವೆಯನ್ನು ಏಪ್ರಿಲ್–2019 ರಿಂದ ಜುಲೈ–2019ರವರೆಗೂ ಅಂದರೆ 04 ತಿಂಗಳ ಅವಧಿಗೆ ಮುಂದುವರೆಸಲು ಸಮ್ಮತಿಸಲಾಯಿತು.

ಕ್ರಮ: ಅಧೀನ ಕಾರ್ಯದರ್ಶಿ

**9. ಆಯೋಗದ ವತಿಯಿಂದ "Success Stories" ಎಂಬ ಕಿರುಹೊತ್ತಿಗೆ ತಯಾರಿಸುವ ಕುರಿತು.**

ಆಯೋಗದ ನ್ಯಾಯಾಲಯದಿಂದ ಹೊರಡಿಸಲಾದ ಮಾದರಿ ಆದೇಶಗಳನ್ನು ಕ್ರೋಢೀಕರಿಸಿ **"Success Stories"** ಎಂಬ ಕಿರುಹೊತ್ತಿಗೆ ತಯಾರಿಸಲು ಈ ಹಿಂದೆಯೇ ಸರ್ಕಾರ ಅನುಮತಿಸಿದ್ದು, ತಮ್ಮ ನ್ಯಾಯಾಲಯದಿಂದ ಹೊರಡಿಸಲಾದ ಮಾದರಿ ಆದೇಶಗಳನ್ನು ಒದಗಿಸಲು ಎಲ್ಲಾ ಆಯುಕ್ತರುಗಳಿಗೆ ಮಾನ್ಯ ಮುಖ್ಯ ಮಾಹಿತಿ ಆಯುಕ್ತರು ತಿಳಿಸಲಾಗಿ, ಎಲ್ಲಾ ಮಾನ್ಯ ಆಯುಕ್ತರುಗಳು ಸಮ್ಮತಿಸಿದರು.

**10. ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು.**

1) ಮೇಲ್ಮನವಿದಾರರು ಮರಣ ಹೊಂದಿದ ಸಂದರ್ಭದಲ್ಲಿ ಅಂತಹ ಪ್ರಕರಣಗಳನ್ನು ವಿಚಾರಣೆಗಳನ್ನು ಮುಕ್ತಾಯ ಮಾಡಲು ಸಭೆಯಲ್ಲಿ ನಿರ್ಣಯಿಸಲಾಯಿತು.

2) ಮಾಹಿತಿ ಹಕ್ಕು ಕಾರ್ಯಕರ್ತರು ಕಿರುಕುಳ ನೀಡುವ ಬಗ್ಗೆ ಸಾರ್ವಜನಿಕ ಪ್ರಾಧಿಕಾರಿಗಳಿಂದ ದೂರು ಬಂದಲ್ಲಿ ಅಂತಹ ದೂರುಗಳನ್ನು ತೀರ್ಮಾನಿಸಲು ಆಯುಕ್ತರುಗಳಿಂದ ವೈಯಕ್ತಿಕ ಲಿಖಿತ ಹೇಳಿಕೆಗಳನ್ನು ಪಡೆದು ಕ್ರಮವಹಿಸಲು ನಿರ್ಧರಿಸಲಾಯಿತು.

3) ಕೇಂದ್ರ ಮಾಹಿತಿ ಆಯೋಗದ ಮಾದರಿಯಂತೆ ಪ್ರತಿ ಆಯುಕ್ತರುಗಳಿಗೆ ಅಧಿಕಾರಿಗಳನ್ನು ಒದಗಿಸುವ ಕುರಿತು ಪ್ರಸ್ತಾವನೆಯನ್ನು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಯುವ ಮುಂದಿನ ಉನ್ನತ ಅಧಿಕಾರಸ್ಥ ಸಮಿತಿ ಸಭೆಯಲ್ಲಿ ಸಲ್ಲಿಸಲು ಕ್ರಮವಹಿಸುವಂತೆ ನಿರ್ಧರಿಸಲಾಯಿತು.

ಸಭೆಗೆ ಹಾಜರಾಗಿದ್ದ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

27/3/2019

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಸಿಆಸುಇ (ಜನಸ್ಪಂದನ), ಬೆಂಗಳೂರು ರವರ ಮಾಹಿತಿ ಮತ್ತು ಅವಗಾಹನೆಗಾಗಿ,
2) ಮಾನ್ಯ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಆಪ್ತ ಶಾಖೆಗೆ.
3) ಮಾನ್ಯ ರಾಜ್ಯ ಮಾಹಿತಿ ಆಯುಕ್ತರುಗಳ ಆಪ್ತ ಶಾಖೆಗೆ, ನ್ಯಾ.ಸ–02 ರಿಂದ ನ್ಯಾ.ಸ–08 ರವರೆಗೆ.
4) ಕಛೇರಿ ಪ್ರತಿ.